ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ಸೀಟು ಹಂಚಿಕೆ/2017-18 ದಿನಾಂಕ: 15-05-2017

: : ಜ್ಞಾಪನ :

ವಿಷಯ: 2017-18ನೇ ಸಾಲಿನ ಆರ್.ಟಿ.ಇ ಕಾಯ್ದೆಯಡಿ ಆನ್‌ಲೈನ್ ಲಾಟರಿ ಮುಖಾಂತರ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳ ದಾಖಲಾತಿ ಬಗ್ಗೆ.

ಉಲ್ಲೇಖ: 1. ಮೊದಲ ಸುತ್ತಿನ ಆನ್‌ಲೈನ್ ಸೀಟು ಹಂಚಿಕೆ ದಿನಾಂಕ:28-04-2017.
2. ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ: 02-05-2017.
3. ಈ ಕಛೇರಿಯ ಪತ್ರಿಕಾ ಪ್ರಕಟಣೆ ದಿನಾಂಕ:10-05-2017.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017-18ನೇ ಸಾಲಿನಲ್ಲಿ ಆರ್.ಟಿ.ಇ ಅಡಿ ಆನ್‌ಲೈನ್ ಲಾಟರಿ ಮುಖಾಂತರ ಸೀಟು ಹಂಚಿಕೆ ಮಾಡಿ ಹಂಚಿಕೆಯಾದ ವಿದ್ಯಾರ್ಥಿಗಳ ಪೋಷಕರಿಗೆ ಎಸ್.ಎಂ.ಎಸ್ ಸಂದೇಶ ಕಳುಹಿಸಲಾಗಿದೆ.

ಈ ಪೈಕಿ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳಲ್ಲಿ ಇದುವರೆವಿಗೂ ಕಾರಣಾಂತರಗಳಿಂದ 12,523 ವಿದ್ಯಾರ್ಥಿಗಳು ದಾಖಲಾತಿ ಆಗದೆ ಇರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಸದರಿ ವಿದ್ಯಾರ್ಥಿಗಳ ವಿವರಗಳನ್ನು ಇಲಾಖೆಯ ವೆಬ್‌ಸೈಟ್‌ನ DASH BOARD ನಲ್ಲಿ ಪ್ರಕಟಿಸಲಾಗಿದೆ ಹಾಗು ಸಂಬಂಧಿಸಿದ ಪೋಷಕರಿಗೆ ಎಸ್.ಎಂ.ಎಸ್ ಮುಖಾಂತರ ಮತ್ತೊಮ್ಮೆ ಸಂದೇಶವನ್ನು ರವಾನಿಸಲಾಗಿದೆ.

ಸದರಿ ವಿದ್ಯಾರ್ಥಿಗಳ ದಾಖಲಾತಿ ಕುರಿತಂತೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ವೈಯುಕ್ತಿಕ ಗಮನ ನೀಡಿ ದಿನಾಂಕ: 17-05-2017ರ ಒಳಗಾಗಿ ಸಂಬಂಧಿಸಿದ ಪೋಷಕರನ್ನು ಸಂಪರ್ಕಿಸಿ ಸೀಟು ಹಂಚಿಕೆಯಾದ ಶಾಲೆಗಳಲ್ಲಿ ದಾಖಲಾತಿ ಮಾಡಿಕೊಳ್ಳುವಂತೆ ಕ್ರಮವಹಿಸಲು ಹಾಗೂ ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಗಳಿಗೆ ಸೂಕ್ತ ನಿರ್ದೇಶನ ನೀಡಿ ಸದರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಸಿ ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡಿರುವುದನ್ನು ಖಾತರಿ ಪಡಿಸಿಕೊಂಡು ಸಂಬಂಧಿಸಿದ ಉಪನಿರ್ದೇಶಕರಿಗೆ ದಿನಾಂಕ:17-05-2017ರ ಸಂಜೆ 3-30ರ ಒಳಗೆ ಸಲ್ಲಿಸುವುದು.

ಈ ವಿಷಯದಲ್ಲಿ ಆಯಾ ವ್ಯಾಪ್ತಿಯ ಉಪನಿರ್ದೇಶಕರು(ಆಡಳಿತ) ಇವರು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು, ಶಾಲಾ ಆಡಳಿತ ಮಂಡಳಿಗಳು ಹಾಗೂ ಸೀಟು ಹಂಚಿಕೆಯಾಗಿ ಶಾಲೆಯಲ್ಲಿ ದಾಖಲಾತಿ ಮಾಡಿಕೊಳ್ಳದ ಪೋಷಕರೊಂದಿಗೆ ಸಮನ್ವಯವನ್ನು ಸಾಧಿಸಲು ಹಾಗೂ ದಾಖಲಾತಿ ಬಗ್ಗೆ ಏನಾದರು ಸಮಸ್ಯೆಗಳಿದ್ದಲ್ಲಿ ಆದ್ಯತೆ ಮೇರೆಗೆ ವೈಯುಕ್ತಿಕ ಗಮನಹರಿಸಿ ಪರಿಹರಿಸಲು ಸೂಚಿಸಲಾಗಿದೆ.

ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಉಪನಿರ್ದೇಶಕರು(ಆಡಳಿತ) ಇವರು ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇವರ ಇ-ಮೇಲ್: prydirector.edu.sgkar@nic.in, rtektk@gmail.com ವಿಳಾಸಕ್ಕೆ ದಿನಾಂಕ:17-05-2017 ರಂದು ಸಂಜೆ 5-00 ಗಂಟೆಯೊಳಗೆ ಕಳುಹಿಸಿಕೊಡಲು ತಿಳಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ರವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಶ್ರೀ ಶಿವಕುಮಾರ್, ಶ್ರೀಮತಿ ವಿಜಯ ಅರುಣಾ ಇವರಿಗೆ ಕಳುಹಿಸುತ್ತಾ ಸಂಬಂಧಿಸಿದ ವಿದ್ಯಾರ್ಥಿಗಳ ವಿವರಗಳನ್ನು DASH BOARD ನಲ್ಲಿ ಪ್ರಕಟಿಸಲು ಮತ್ತು ದಾಖಲಾತಿ ಸಾಫ್ಟ್‌ವೇರ್ ಬಿಡುಗಡೆಗೊಳಿಸಲು ಸೂಚಿಸಲಾಗಿದೆ.
2. ಕಛೇರಿ ಪ್ರತಿ.